(ಖ) ಬಿಜಾಪುರದಲ್ಲಿ ಕೃಷಿ ವಿಮೆ ಯೋಜನೆ

ಶ್ರೀ ಎಸ್. ಶಿವಾನಂದ ಪಾಟೀಲ್ (ತಿಕೋಟಾ) : ಮಾನ್ಯ ಅಧ್ಯಕ್ಷರೇ, ಸಂಯುಕ್ತ ರಂಗ ಸರಕಾರವು ಬಂದಾಗ ಈ ರಾಜ್ಯದಲ್ಲಿ ಒಂದು ಕೃಷಿ ವಿಮೆ ಯೋಜನೆಯನ್ನು ಘೋಷಿಸಿ , ಆ ಯೋಜನೆಯ ಫಲವನ್ನು ಬಿಜಾಪುರ ಜಿಲ್ಲೆಗೆ ಕೊಟ್ಟಿದ್ದು ಸ್ವಾಗತಾರ್ಹ. ಅದರಲ್ಲಿನ ಒಂದು ನ್ಯೂನ್ಯತೆ ಏನೆಂದರೆ, ಅಲ್ಲಿ ಚಿಕ್ಕ ಮತ್ತು ಅತಿ ಚಿಕ್ಕ ಹಿಡುವಳಿದಾರರು 1 ಲಕ್ಷದ 8 ಸಾವಿರಗಳವರೆಗೆ ಇದ್ದರೆ ಕೇವಲ 68 ಸಾವಿರ ಜನರಿಗೆ ಮಾತ್ರ ಯೋಜನೆಯ ಲಾಭವು ಸಿಕ್ಕಿದೆ. ಇನ್ನೂ 45 ಸಾವಿರ ಜನ ರೈತರಿಗೆ ಈ ಯೋಜನೆಯ ಲಾಭ ಸಿಕ್ಕುತ್ತಾ ಇಲ್ಲ. ನಿಮ್ಮ ಅಧಿಕಾರಗಳ ನಿರ್ಲಕ್ಷ್ಯತನದಿಂದ 45000 ರೈತರಿಗೆ ಈ ಯೋಜನೆಯ ಲಾಭ ಸಿಗುತ್ತಿಲ್ಲ. ಚಿಕ್ಕ ಹಿಡುವಳಿದಾರರು ಮತ್ತು ಅತಿ ಚಿಕ್ಕ ಹಿಡುವಳಿದಾರರು ಎಂದು ಏನು ಡೆಫನೆಕ್ಷನ್ ಇದೆ, ಇದರಲ್ಲಿ ಸ್ವಲ್ಪ ನ್ಯೂನತೆ ಇದೆ. ಕೇಂದ್ರ ಸರಕಾರ 5 ಎಕರೆಯವರೆಗೆ ಮಾತ್ರವೆಂದು ಘೋಷಿಸಿದೆ ರಾಜ್ಯ ಸರಕಾರ ಘೋಷಿಸಿರುವುದರಲ್ಲಿ 7 ಎಕರೆಗಿಂತಲೂ 5- 10 ಗುಂಟೆ ಹೆಚ್ಚು ಇದೆ. 5 ಎಕರೆಯಲ್ಲಿ ಬರತಕ್ಕಂತಹ ರೈತರಿಗೆ ಇದರಿಂದ ಲಾಭ ಸಿಗುತ್ತಿದೆ. 7 ಎಕರೆ ರೈತರಿಗೆ ಇದರಿಂದ ಲಾಭ ಸಿಗುತ್ತಿಲ್ಲ. 40,000 ರೈತರಿಗೆ ಇಲ್ಲಿಯವರಿಗೆ ಈ ಯೋಜನೆಯಿಂದ ಲಾಭ ಸಿಕ್ಕಿಲ್ಲ. ಎರಡು ಸಲ ಅವಧಿ ವಿಸ್ತರಣೆ ಮಾಡಿಕೊಟ್ಟರೂ ಕೂಡ ಅಲ್ಲಿನ ಅಧಿಕಾರಿಗಳ ನಿರ್ಲಕ್ಷತನದಿಂದ ರೈತರಿಗೆ ಇದರಿಂದ ಲಾಭ ಸಿಕ್ಕಿಲ್ಲ. ಈ ಯೋಜನೆ ಸರಕಾರದ ಘೋಷಣೆಯಾಗಿರುವುದರಿಂದ ನಮ್ಮ ಜಿಲ್ಲೆಯಲ್ಲಿ ಹಾಹಾಕಾರವಾಗಿಲ್ಲ. ಇಲ್ಲವಾದಲ್ಲಿ ಬೀದರ್, ಗುಲ್ಬರ್ಗ ಜಿಲ್ಲೆಗಳಿಗಿಂತ ಹೆಚ್ಚು ಹಾಹಾಕರಾ ಬಿಜಾಪುರದಲ್ಲಿ ಆಗಬೇಕಾಗಿತ್ತು. ಈ ಬೆಳೆ ವಿಮೆ ಯೋಜನೆಯನ್ನು 45000 ಜನರಿಗೂ ಕೊಡುವ ಪ್ರಯತ್ನ ಮಾಡುತ್ತೀರೋ ಇಲ್ಲವೋ ಎಂಬುದನ್ನು ತಿಳಿಸಬೇಕು. ಮತ್ತು ಚಿಕ್ಕ ಹಿಡುವಳಿದಾರರು ಅತಿ ಚಿಕ್ಕ ಹಿಡುವಳಿದಾರರು ಎಂದು ಇರುವ ನ್ಯೂನತೆಯ ಬಗ್ಗೆ ತಿದ್ದುಪಡಿ ಮಾಡಲಿಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು) :- ಮಾನ್ಯ ಶಿವಾನಂದ ಪಾಟೀಲರು ಈ ಯೋಜನೆಯನ್ನು ಸ್ವಾಗತ ಮಾಡಿದ್ದಾರೆ ಅದಕ್ಕಾಗಿ ಸರಕಾರ ಅವರನ್ನು ಅಭಿನಂದಿಸುತ್ತದೆ. ಧನ್ಯವಾದಗಳು. ಪ್ರಾಯೋಗಿಕವಾಗಿ ಕಾರ್ಯಗತ ಮಾಡತಕ್ಕಂತಹ ಯೋಜನೆ ಹೊಸ ಚಿಂತನೆ ದೇಶದಲ್ಲಿ ಪ್ರಾರಂಭವಾಗಿದೆ. ಈ ಸದನದ ಸದಸ್ಯರಿಗೆ ಮತ್ತು ಹೊರಗಡೆ ಕೂಡ ನಾನು ಹೇಳಿದ್ದೇನೆ. ಈ ದೇಶದಲ್ಲಿನ, ರಾಜ್ಯದಲ್ಲಿನ ರೈತರ ಪರಿಸ್ಥಿತಿ ಏನು ಇದೆ ಆ ಪರಿಸ್ಥಿತಿಯನ್ನು ಉತ್ತಮಪಡಿಸಬೇಕು ಎನ್ನುವುದಕ್ಕೆ ತೆಗೆದುಕೊಂಡಿರತಕ್ಕಂಥಹ ಕಾರ್ಯಕ್ರಮಗಳಲ್ಲಿ ಅತಿ ಪ್ರಾಮುಖ್ಯವಾದ ಕಾರ್ಯಕ್ರಮ ಇದಾಗಿದೆ. ಇದು ಪ್ರಾಯೋಗಿಕವಾಗಿ ನಡೆಯುತ್ತಿರುವುದರಿಂದ ಪ್ರಾರಂಭದ ಹಂತದಲ್ಲಿ ಕೆಲವು ನ್ಯೂನತೆಗಳು ಎಡರುತೊಡರುಗಳು ಇಲ್ಲಿ ಇರತಕ್ಕಂಥಾದ್ದು ಸಹಜ. ಇದನ್ನು ಸರಿಪಡಿಸುವುದಕ್ಕೆ ಸರಕಾರ ಮತ್ತು ನಾನು ವೈಯಕ್ತಿಕವಾಗಿ ತೀವ್ರ ಪರಿಶೀಲನೆ ಮಾಡುತ್ತಿದ್ದೇವೆ. ಸರಕಾರದವರು ಎದುರಿಸತಕ್ಕಂತಹ ಕೆಲವು ನ್ಯೂನತೆಗಳು ಏನು ಇವೆ ಮತ್ತು ಕೇಂದ್ರ ಸರಕಾರದ ಬೃಹತ್ ರಾಷ್ಟ್ರವ್ಯಾಪ್ತಿಯಾಗಿರತಕ್ಕಂತಹ ಯೋಜನೆ ಇದನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಇದನ್ನು ಮಾರ್ಪಾಡು ಮಾಡತಕ್ಕಂಥಾದ್ದು ಕಷ್ಟಸಾಧ್ಯದ ಕೆಲಸವಾಗಿದೆ. ಈ ಯೋಜನೆಯನ್ನು ರೂಪಿಸಿರತಕ್ಕಂತಹ ಕೇಂದ್ರ ಸರಕಾರದ ಜೊತೆ ಸಂಪರ್ಕ ಬೆಳೆಸಿ ಇದನ್ನು ಕಾರ್ಯಗತ ಮಾಡಲಿಕ್ಕೆ ಇರತಕ್ಕಂತಹ ಅಡೆತಡೆಗಳು ಏನು ಇದೆ ಅದನ್ನು ಸರಿಪಡಿಸತಕ್ಕಂತಹ ಕಾರ್ಯಕ್ರಮ ಮಾಡುತ್ತೇವೆ. ಇನ್ನು ಕೆಲವು ಅಧಿಕಾರಿಗಳು ಬೇಜವಾಬ್ದಾರಿಯಿಂದ ವರ್ತನೆ ಮಾಡಿದ್ದಾರೆಂದು ಮಾನ್ಯ ಸದಸ್ಯರು ಹೇಳಿದಾದರೆ. ಇದರ ಬಗ್ಗೆ ಎಲ್ಲಾ ಪ್ರಚಾರವನ್ನು ಕೊಡಲಾಗಿದೆ

ಟಾಂ ಟಾಂ ಮಾಡಿ ಭಿತ್ತಿ ಪತ್ರಗಳನ್ನು ಹಂಚಿದ್ದೇವೆ. ಬಿಜಾಪುರದಲ್ಲಿ ಕೆಲವು ರೈತರಿಗೆ ಹೊರಗಡೆ ಹೋಗತಕ್ಕಂತಹ ಅಭ್ಯಾಸ ಇರುವುದರಿಂದ, ಅವರು ಹೇಳಿದ ಹಾಗೆ ಇನ್ನೂ ಬಹಳಷ್ಟು ಜನ ರೈತರನ್ನು ಈ ಯೋಜನೆಗೆ ಒಳಪಡಿಸುವುದಕ್ಕೆ ಸಾಧ್ಯವಾಗಿಲ್ಲ. ಇದರ ಬಗ್ಗೆ ತೀವ್ರವಾಗಿ ಪ್ರಯತ್ನ ಮಾಡುತ್ತೇನೆ. ಒಂದೇ ವರ್ಷಕ್ಕೆ ಈ ಯೋಜನೆ ಇರುವುದಾದರೂ ಸಹ ಈ ಯೋಜನೆಯ ಪ್ರತಿ ಫಲವನ್ನು ಅನುಸರಿಸಿ ಇದನ್ನು ಮುಂದುವರಿಸುವ ಆಲೋಚನೆ ಇದೆ. ಮುಂದೆ ಇದನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

Mr. SPEAKER :- No clarifications during zerohour.

(ಖೂ) <u>ಅನಾಥಾಶ್ರಮದಲ್ಲಿನ ಹೆಣ್ಣು ಮಕ್ಕಳಿಗೆ ಉದ್ಯೋಗ</u>

ಶ್ರೀ ಸಿ. ಗುರುನಾಥ (ಶಹಬಾದ್) :- ಮಾನ್ಯ ಅಧ್ಯಕ್ಷರೆ, ಅನಾಥ ಹೆಣ್ಣುಮಕ್ಕಳು ಅನಾಥಾಶ್ರಮದಲ್ಲಿ ಇದ್ದಾರೆ. ಹಲವಾರು ಕಾರಣಕ್ಕಾಗಿ ಅನಾಥ ಆಶ್ರಮದಲ್ಲಿ ಹೆಣ್ಣುಮಕ್ಕಳು ಗಂಡುಮಕ್ಕಳು ಇದ್ದಾರೆ. ಈ ಅನಾಥಾಶ್ರಮದಲ್ಲಿರತಕ್ಕಂತಹ ಹೆಣ್ಣು ಮಕ್ಕಳ ಬಗ್ಗೆ ಯಾರೂ ಚಿಂತೆ ಮಾಡುವ ಸ್ಥಿತಿಯಲ್ಲಿ ಇಲ್ಲ. ಅನೇಕ ಹೆಣ್ಣುಮಕ್ಕಳು ತಮ್ಮ ಬಾಲ್ಯದಿಂದ ಮುಪ್ಪಿನವರೆಗೆ ಅನಾಥಾಶ್ರಮದಲ್ಲಿ ಯಾವುದೇ ಸುಖ ಸಂತೋಷ ಪಡೆಯದೇ ಇದ್ದಾರೆ. ಅವರಿಗಾಗಿ ವಿಶೇಷವಾದ ಪ್ರಾತಿನಿಧ್ಯವನ್ನು ಶಿಕ್ಷಣದಲ್ಲಿ ಉದ್ಯೋಗದಲ್ಲಿ ಕೊಡಬೇಕೆಂದು ನನ್ನ ಅನಿಸಿಕೆ ಇದೆ. ಅನಾಥಾಶ್ರಮದಲ್ಲಿರತಕ್ಕಂತಹ ಗಂಡು ಮಕ್ಕಳು ಸ್ವಲ್ಪ ವಯಸ್ಸಾದ ನಂತರ ಅಲ್ಲಿಂದ ಹೊರಗೆ ಹೋಗಿ ಅವರು ತಮ್ಮ ಕಾಲ ಮೇಲೆ ನಿಲ್ಲತಕ್ಕಂತಹ ವ್ಯವಸ್ಥೆ ಮಾಡಿಕೊಳ್ಳಬಹುದು. ಆದರೆ ಹೆಣ್ಣುಮಕ್ಕಳ ಪರಿಸ್ಥಿತಿ ಬಹಳ ಕೆಟ್ಟು ಹೋಗಿದೆ. ಈ ಸಮಾಜದಲ್ಲಿ ಅವರು ಮದುವೆಯಾಗದೆ ಮುಪ್ಪನ್ನಪ್ಪಿದ್ದಾರೆ. ಅವರಿಗೆ ವೃತ್ತಿಪರ ಶಿಕ್ಷಣದಲ್ಲಿ ಮತ್ತು ಉದ್ಯೋಗದಲ್ಲಿ ಮೀಸಲಾತಿ ಕೊಟ್ಟರೆ ಅವರು ತಮ್ಮ ಕಾಲ ಮೇಲೆ ನಿಲ್ಲಬಹುದು. ಅದರಿಂದ ಅವರ ಮದುವೆಯಾಗತಕ್ಕಂತಹ ಸಂದರ್ಭ ಕೂಡ ಬರುತ್ತದೆ. ಸರಕಾರ ಇಂತಹ ಅವಕಾಶವನ್ನು ಅವರಿಗೆ ಒದಗಿಸಿಕೊಡುವ ಪ್ರಯತ್ನ ಮಾಡಬೇಕೆಂದು ವಿನಂತಿಸುತ್ತೇನೆ.

ಶ್ರೀಮತಿ ಮಿಮಲಾಬಾಯಿ ದೇಶಮುಖ (ಮಹಿಳೆಯರ ಮತ್ತು ಮಕ್ಕಳ ಕಲ್ಯಾಣ ಸಚಿವೆ):- ಮಾನ್ಯ ಗುರುನಾಥ್ ಅವರು ಹೇಳಿದ ಪ್ರಕಾರ ಅನಾಥ ಹೆಣ್ಣುಮಕ್ಕಳಿಗಾಗಿ ಅನಾಥಾಲಯದಲ್ಲಿ ಕೈಗಾರಿಕೋದ್ಯಮಗಳನ್ನು ಪ್ರಾರಂಭಿಸಿದ್ದೇವೆ. ಆದರೆ ವೃದ್ಧಾಶ್ರಮದಲ್ಲಿ ಅವರಿಗೆ ಮಾಡಲು ಕೆಲಸ ಇಲ್ಲದ್ದರಿಂದ ಅವರಿಗಾಗಿ ಯಾವುದೇ ಕೈಗಾರಿಕೆಯನ್ನು ಪ್ರಾರಂಭ ಮಾಡಿಲ್ಲ. 18 ವರ್ಷದವರೆಗೆ ನಾವು ಅನಾಥಾಲಯದಲ್ಲಿ ಶಿಕ್ಷಣ ಕೊಡುತ್ತೇವೆ. ಮುಂದಾದರೂ ಪರಿಶೀಲನೆ ಮಾಡಿ ಎಲ್ಲಾ ಹೆಣ್ಣು ಮಕ್ಕಳಿಗೆ ಶಿಕ್ಷಣ ಕೊಡುವ ವ್ಯವಸ್ಥೆ ಮಾಡುತ್ತೇವೆ.

(ಎ) <u>ಚಿಂಚೋಳಿಯ ಒಂದು ಗ್ರಾಮದಲ್ಲಿ ತೊಗರಿಬೆಳೆ ನಾಶವಾಗಿರುವುದರಿಂದ ರೈತರ ಆತ್ಮಹತ್ಯೆ</u>

ಶ್ರೀ ವೈಜನಾಥ ಪಾಟೀಲ್ (ಚಿಂಚೋಳಿ) :- ಚಿಂಚೋಳಿಯ ಒಂದು ಗ್ರಾಮದಲ್ಲಿ ಸುಬ್ಬಣ್ಣ ಹಡಪದ ಎಂಬ ಬಡ ರೈತ ತೊಗರಿ ಬೇಳೆ ಲಾಸಾದ್ದರಿಂದ ಅವನು ತನ್ನ ಎತ್ತುಗಳನ್ನು ಮಾರಿಕೊಂಡಿದ್ದಾನೆ. ಇಂತಹ ಪರಿಸ್ಥಿತಿಯಲ್ಲ ಅವನು ಆತ್ಮಹತ್ಯೆ ಮಾಡಿಕೊಂಡಿದ್ದಾನೆಂದು ವರದಿಯಾಗಿದೆ ಸರಕಾರ ಆತನ ಕುಟುಂಬಕ್ಕೆ ಪರಿಹಾರ ಕೊಡಬೇಕು. ತೊಗರಿ ಬೆಳೆ ನಾಶವಾದುದಕ್ಕಾಗಿ